ಅಭಿಯಾಚನೆ ಕ್ರಮಾಂಕ ೩೧–ವೈದ್ಯಕೀಯ ಸೇವೆ, ಕುಟುಂಬ ಕಲ್ಯಾಣ ಮತ್ತು ಜರಾರೋಗ್ಯ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨, ೧೯, ೬೨, ೨೦, ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨, ೦೦, ೦೦, ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "
ಅಧ್ಯಕ್ಷರು. —ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ನೀಲಗಿರಿ ಗಿಡಗಳನ್ನು ಬೆಳೆಸುವುದು

೮೭೧ (೨೬೯೪) ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಹೋಬಳಿ ಕರಕುಚ್ಚಿ ಗ್ರಾಮಕ್ಕೆ ಸೇರಿದ ಸುಮಾರು ೭೦ ಎಕರೆ ಪ್ರದೇಶದಲ್ಲಿ ಬೆಳೆಸಿದ್ದ ನೀಲಗಿರಿ ಮರಗಳನ್ನು ಕಡಿದು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರೀ ನೀಲಗಿರಿ ಗಿಡಗಳನ್ನು ಬೆಳೆಸಿದ್ದು ಯಾವಾಗ ? ಇದಕ್ಕೆ ತಗುಲಿದ ವೆಚ್ಚ ವೆಷ್ಟು ?

ಇ) ಈ ಅರಣ್ಯ ನಾಶವನ್ನು ಮಾಡಿದವರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಲಕ್ಕವಳ್ಳಿ ಹೋಬಳಿ. ಕುರಕುಚ್ಚಿ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಂದ ಜವಿೂನಪ್ಪನ್ನು ಒತ್ತುವರಿ ಪಡಿಸಿಕೊಳ್ಳುವುದಕ್ಕೋಸ್ಕರ ನೀಲಗಿರಿ ಮರಗಳ ಕಡಿತಲೆಯಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಹೀಗೆ ಕಡಿತಲೆಯಾಗಿರುವ ನೆಡುತೋಪುಗಳ ವಿಸ್ತೀರ್ಣವು ೪೫ ಎಕರೆಗಳಷ್ಟಾಗಿದೆ.

ಆ) ೧೯೮೩ನೇ ಇಸವಿಯಲ್ಲಿ ೪೫ ಎಕರೆ ವಿಸ್ತೀರ್ಣದಲ್ಲಿ ಬೆಳಸಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ. ೫೦, ೦೦೦–೦೦ ಗಳು.

ಇ) ಇದರ ಬಗ್ಗೆ ತಾರೀಖು ೨೩–೫–೮೯ರ ರಂದು ಲಕ್ಕವಳ್ಳಿಯ ಪೋಲೀಸ್ ಠಾಣೆಗೆ ದೂರನ್ನು ಕೊಡಲಾಗಿದೆ. ಇದಕ್ಕೆ ಮುನ್ನ ಲಕ್ಕವಳ್ಳಿವಲಯ ವಲಯ ಅರಣ್ಯಾಧಿಕಾರಿಯವರು ಎರಡು ಮೊಕದ್ದಮೆಗಳನ್ನು ೧೮–೫–೧೯೮೯ ರಂದು ದಾಖಲು ಮಾಡಿಕೊಂಡಿರುವರು.

(ಉಪಾಧ್ಯಕ್ಷರು ಪೀಠದಲ್ಲಿದ್ದರು.)

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಅಧ್ಯಕ್ಷರೇ, ೧೯೮೮ನೇ ಇಸವಿಯಲ್ಲಿ ೪೫ ಎಕರೆ ಪ್ರದೇಶದಲ್ಲಿ ಅರಣ್ಯವನ್ನು ೫ ವರ್ಷಗಳಿಂದ ಬೆಳೆಸಿದ್ದಾರೆ. ಅದಕ್ಕೆ ೫೦,೦೦೦ ರೂಪಾಯಿ ಖರ್ಚಾಗಿದೆ. ಈ ಅರಣ್ಯವನ್ನು ನಾಶ ಮಾಡಬೇಕಾದರೆ ಅಧಿಕಾರಿಗಳು ಏನು ಮಾಡುತ್ತಿದ್ದರು ? ಎರಡನೆಯದಾಗಿ ಯಾರೋ ಬಡಪಾಯಿ ಕೂಲಿ ಕಾರ್ಮಿಕರು ೧೦–೧೫ ವರ್ಷ ಸಾಗುವಳಿ ಮಾಡಿದಂಥವರನ್ನು ಬಿಡಿಸಿ ಸಸಿ ನೆಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ತಪ್ಪಲ್ಲವೇ ? ೫೦ ಸಾವಿರ ರೂಪಾಯಿ ಖರ್ಚು ಮಾಡಿ ಬೆಳೆಸಿರುವ ಅರಣ್ಯವನ್ನು ಏಕಕಾಲದಲ್ಲಿ ನಾಶ ಮಾಡಬೇಕಾದರೆ ಇಲಾಖೆಯವರು ನಿದ್ದೆ ಮಾಡುತ್ತಿದ್ದರೆ ? ಇಲಾಖೆಯವರಿಗೆ ಗೊತ್ತಾಗಲಿಲ್ಲವೆ ? ಸರ್ಕಾರದವರು ಏನು ಮಾಡುತ್ತಿದ್ದರು ? ಇಲ್ಲಿ ಸರ್ಕಾರ ಎಂಬುದು ಇದೆಯೇ ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದಾರೆ ? ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅರಣ್ಯ ನಾಶ ತಡೆಯಲು ಸಿಬ್ಬಂದಿವರ್ಗ ಇರಲಿಲ್ಲವೆ ? ಡಿ. ಎಫ್. ಓ. ಇಲ್ಲವೇ ?

ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಇದೆಯೇ ಎಂದು. ಪ್ರಶ್ನೆಯನ್ನೇ ಕೇಳಿದುದ್ದು.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಸದಸ್ಯರ ಮನಸ್ಸಿನಲ್ಲಿರತಕ್ಕ ಆತಂಕ ನನಗೆ ಅರ್ಥವಾಗಿದೆ. ಈಗಾಗಲೇ ಇಲಾಖೆ ಅನೇಕರ ಮೇಲೆ ಪೋಲೀಸ್‌ನವರಿಗೆ ದೂರು ಕೊಡುವುದರ ಜೊತೆಗೆ ಕೇಸ್ ಕೂಡ ದಾಖಲು ಮಾಡಲಾಗಿದೆ. ಇದರಲ್ಲಿ ಇಲಾಖೆಯ ಅಧಿಕಾರಿಗಳು ಯಾರಾದರು ತಪ್ಪಿತಸ್ಥರೆಂದು ಕಂಡು ಬಂದರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಒಂದು ಎಕರೆ, ಅರ್ಧ ಎಕರೆ ಅರಣ್ಯವನ್ನು ನಾಶ ಮಾಡಬೇಕಾದರೆ ಒಂದು ಗಂಟೆ-೨ ಗಂಟೆಯಾದರೂ ಬೇಕಾಗುತ್ತದೆ. ಆದರೆ ೪೭ ಎಕರೆಯಲ್ಲಿದ್ದಂತಹ ಅರಣ್ಯವನ್ನು ಕಡಿಯಬೇಕಾದರೆ. ಇಲಾಖೆಯವರು ಏನಾದರೂ ಮಲಗಿದ್ದರಾ ? ಅಥವಾ ನಿದ್ರೆ ಮಾಡುತ್ತಿದ್ದರಾ ? ಇದನ್ನು ನೋಡಿದ ಮೇಲೆ ಇಲಾಖೆ ನಿದ್ರೆ ಮಾಡುತ್ತಿದೆ ಎಂಬುದನ್ನು ನಾವೂ ಒಪ್ಪಿಕೊಳ್ಳಬೇಕಾಗುತ್ತದೆ. ಮಂತ್ರಿಗಳೂ ಒಪ್ಪಿಕೊಳ್ಳಬೇಕಾಗುತ್ತದೆ. ತಪ್ಪು ಮುಖ್ಯಾಂತರ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ೨-೩ ವರ್ಷಗಳಿಂದ ಬಡವರು ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಸಾವಿರ ಗಟ್ಟಲೆ ಎಕರೆ ಅರಣ್ಯ ಪ್ರದೇಶವನ್ನು ಅತಿಕ್ರಮ ಮಾಡಿರುವಂತ ಶ್ರೀ ಮಂತರನ್ನು ಅರಣ್ಯದಿಂದ ಎಬ್ಬಿಸುವುದಕ್ಕೆ ಇವರಿಗೆ ಆಗುವುದಿಲ್ಲ. ಯಾರಾದರು ಬಡವರು ಸಿಕ್ಕರೆ ಅವರ ಜಮೀನಿನಲ್ಲಿ ಬುಲ್ಡೋಜರ್ ಅನ್ನು ತೆಗೆದುಕೊಂಡು ಬಂದು ನಾಶ ಮಾಡುತ್ತಾರೆ. ೫ ವರ್ಷ ಬೆಳೆದಂತಹ ಕಾಡನ್ನು ಕಡಿಯಬೇಕಾದರೆ ನಿಮ್ಮ ಇಲಾಖೆ ಏನು ಮಾಡುತ್ತಿತ್ತು ? ಅಂತಹ ಅಧಿಕಾರಿಗಳ ಮೇಲೆ ತೀವ್ರ ರೀತಿಯ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಆ ಬಗ್ಗೆ ತನಿಖೆ ಮಾಡಿ ಆದಷ್ಟು ತೀವ್ರ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವುದು

೮೭೨(೨೦೪೩) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಪಶು, ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಾನ್ಯ ಪಶುಸಂಗೋಪನಾ ಸಚಿವರು ಘೋಷಿಸಿರುವಂತೆ ೭೫೦೦ ದನಕರುಗಳಿಗೆ ಒಂದರಂತೆ ಪಶುವೈದ್ಯ ಶಾಲೆಯನ್ನು ತೆರೆಯುವ ಯೋಜನೆ ಕಾರ್ಯರೂಪಕ್ಕೆ ತರಲಾಗಿದೆಯೆ?

ಆ) ರಾಜ್ಯದಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ತೆರೆಯಲಾಗಿದೆ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಇ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ತೆರೆಯಲಾಗಿದೆ?

ಈ) ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ, ಮಾರಿಹಳ್ಳಿ, ಹುಲಿಕಟ್ಟೆ, ಬಾಗಳಿ, ಗೌರಿಹಳ್ಳಿ, ಜಂಬುಲಿಂಗನಹಳ್ಳಿ ಗ್ರಾಮಗಳಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಈ ವರ್ಷ ತೆರೆಯಲಾಗುವುದೆ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ಪಶು, ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ೭,೫೦೦ ದನಗಳ ಘಟಕಗಳಿಗೆ ಒಂದು ಪಶುವೈದ್ಯ ಶಾಲೆಯನ್ನು ತೆರೆಯಬೇಕೆಂಬುದು ಸರ್ಕಾರದ ನೀತಿ. ಆದರೆ ಇದನ್ನು ಕಾರ್ಯರೂಪಕ್ಕೆ ತರಲಾಗಿಲ್ಲ.

ಆ) ೧೨೩೬ (ಜಿಲ್ಲಾವಾರು ಮಾಹಿತಿಯ ಪಟ್ಟಿಯನ್ನು ಲಗತ್ತಿಸಿದೆ)